# ಕರ್ನಾಟಕ ಪಬ್ಲಿಕ್ ಸ್ಕೂಲ್ (ಪ್ರೌಢ ವಿಭಾಗ) ಧನ್ನೂರ ತಾ.ಹುನಗುಂದ ಜಿ.ಬಾಗಲಕೋಟ

## ಸೇತುಬಂಧ ಪರೀಕ್ಷೆ (ಪೂರ್ವ ಪರೀಕ್ಷೆ) – 2025-26

**ವರ್ಗ: 8** **ವಿಷಯ: ಕನ್ನಡ** **ದಿನಾಂಕ: -06-2025**

| ವಿದ್ಯಾರ್ಥಿ/ನಿ ಹೆಸರು : | | | ಹಾಜರಿ ಸಂಖ್ಯೆ : |
|---|---|---|---|
| ಒಟ್ಟು ಎ ಶ್ರೇಣಿ : | ಒಟ್ಟು ಬಿ ಶ್ರೇಣಿ : | ಮೌಲ್ಯಮಾಪಕರ ಸಹಿ : | |

*** ಕೊಟ್ಟಿರುವ ನಾಣ್ಣುಡಿ, ಪದಪುಂಜ, ನುಡಿಗಟ್ಟು, ಸೌಮ್ಯೋಕ್ತಿ ಪದಗಳನ್ನು ಪುನಃ ತಪ್ಪಿಲ್ಲದೇ ಬರೆಯಿರಿ.**

1) ಅಂಗೈಯಲ್ಲಿ ಆಕಾಶ ತೋರಿಸು **ಉತ್ತರ:**______
2) ದೂರದ ಬೆಟ್ಟ ನುಣ್ಣಗೆ **ಉತ್ತರ:**______
3) ಸ್ವಂತ ಕಾಲಿನ ಮೇಲೆ ನಿಲ್ಲು **ಉತ್ತರ:**______
4) ಮೂಗು ತೋರಿಸು **ಉತ್ತರ:**______

*** ಕೊಟ್ಟಿರುವ ಗದ್ಯಭಾಗವನ್ನು ಓದಿಕೊಂಡು, ಮುಂದಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಜನಪದ ನೃತ್ಯಗಳು ಕರ್ನಾಟಕದಾದ್ಯಂತ ಪ್ರಚಲಿತವಿದ್ದು, ನಲವತ್ತಕ್ಕೂ ಹೆಚ್ಚು ಪ್ರಕಾರಗಳು ರೂಢಿಯಲ್ಲಿವೆ. ಅಂತಹ ನೃತ್ಯಗಳಲ್ಲಿ 'ವೀರಗಾಸೆ' ಸಹ ಒಂದಾಗಿದೆ. ವೀರಗಾಸೆ ಶೈವ ಸಂಪ್ರದಾಯದ ಧಾರ್ಮಿಕ ವೀರ ನೃತ್ಯ. ಇದು ಸಾಮೂಹಿಕ ನೃತ್ಯವನ್ನು ಒಳಗೊಂಡ ಕರ್ನಾಟಕದ ವಿಶಿಷ್ಟ ಜನಪದ ಕಲೆ. ಈ ನೃತ್ಯದಲ್ಲಿ ಇಬ್ಬರಿಂದ ಮೂವತ್ತು ಮಂದಿ ಭಾಗವಹಿಸುತ್ತಾರೆ. ಇದರಲ್ಲಿ ಪಂಚವಾದ್ಯಗಳಾದ ತಾಳ, ಶ್ರುತಿ, ಚಮಾಳ, ಓಲಗ ಹಾಗೂ ಕರಡೆ ಬಳಕೆಯಾಗುತ್ತವೆ. 'ಅಹಹ ರುದ್ರಾ, ಅಹಹಾ ದೇವಾ' ಎಂದು ನರ್ತಕನು ಹೇಳುವ ಒಡಪಿನೊಂದಿಗೆ ವೀರಗಾಸೆಯ ಕುಣಿತವು ಪ್ರಾರಂಭವಾಗುತ್ತದೆ. ಈ ಒಡಪಿನಲ್ಲಿ ವೀರಭದ್ರ ದೇವರು ಹುಟ್ಟಿದ ಸಂದರ್ಭದ ವರ್ಣನೆ ಇರುತ್ತದೆ. ಚಮಾಳ ಹಾಗೂ ಕರಡೆಯ ಬಡಿತ ವೀರಗಾಸೆಯ ಕುಣಿತಕ್ಕೆ ಸ್ಫೂರ್ತಿ ನೀಡುತ್ತವೆ. ನಾಲ್ಕೈದು ಗತಿಗಳಲ್ಲಿ ಇರುವ ವೀರಗಾಸೆಯ ಕುಣಿತದಲ್ಲಿ ಒಂದೊಂದು ಗತಿಯ ಕುಣಿತದ ಅನಂತರ ಮತ್ತೊಬ್ಬ ನರ್ತಕ ಒಡಪು ಹೇಳುತ್ತಾನೆ. ಗತಿಯಿಂದ ಗತಿಗೆ ಕುಣಿತ ಬಡಿತಗಳ ವೇಗ ಹೆಚ್ಚುತ್ತಾ ಹೋಗುತ್ತದೆ.

**ಪ್ರಶ್ನೆಗಳು:**

5) ವೀರಗಾಸೆಯು ಯಾವ ಸಂಪ್ರದಾಯಕ್ಕೆ ಸೇರಿದ ನೃತ್ಯವಾಗಿದೆ? **ಉತ್ತರ:**______
6) ವೀರಗಾಸೆಯಲ್ಲಿ ಬಳಸುವ ಪಂಚವಾದ್ಯಗಳು ಯಾವುವು? **ಉತ್ತರ:**______
7) ವೀರಗಾಸೆ ನರ್ತಕರು ಹೇಳುವ ಒಡಪಿನಲ್ಲಿ ಯಾವ ಸಂದರ್ಭದ ವರ್ಣನೆ ಇರುತ್ತದೆ? **ಉತ್ತರ:**______
8) ವೀರಗಾಸೆ ನೃತ್ಯಕ್ಕೆ ಯಾವುದು ಸ್ಫೂರ್ತಿ ನೀಡುವುದು? **ಉತ್ತರ:**______

**9.ಕನ್ನಡ ವರ್ಣಮಾಲೆಯಲ್ಲಿರುವ ಅಕ್ಷರಗಳನ್ನು ಬರೆಯಿರಿ.**

**ಉತ್ತರ:**______

______

______

______

______

______

______

______

______

______

**10. ಕೊಟ್ಟಿರುವ ವ್ಯಂಜನಾಕ್ಷರಗಳಿಗೆ ಸ್ವರ ಸೇರಿಸಿ ಪದ ರಚಿಸಿ ಬರೆಯಿರಿ.**

* ಕ್+ಅ+ನ್+ನ್+ಅ+ಡ್+ಅ = ______ * ವ್+ಯ್+ಆ+ಕ್+ಅ+ರ್+ಅ+ಣ್+ಅ = ______

**11. ಕೊಟ್ಟಿರುವ ಸಂಯುಕ್ತಾಕ್ಷರಗಳಲ್ಲಿ ಸಜಾತಿ ಸಂಯುಕ್ತಾಕ್ಷರ ಮತ್ತು ವಿಜಾತಿ ಸಂಯುಕ್ತಾಕ್ಷಗಳಾವುವು ಹೆಸರಿಸಿರಿ.**

* ಕಸ್ತೂರಿ – ______ * ಮಹಾತ್ಮ : ______

* ಮಹೋನ್ನತ – ______ * ವ್ಯಕ್ತಿತ್ವ – ______

**12. ಕೆಳಗಿನ ವಿಶಿಷ್ಟ ಪದಪುಂಜಕ್ಕೆ ಅರ್ಥ ಬರೆದು, ಸ್ವಂತವಾಕ್ಯದಲ್ಲಿ ಬರೆಯಿರಿ.**

* ಕೆಲಸ : ______ * ಶಾಲೆ :

______

**13. ಕೆಳಗಿನ ಲೇಖನ ಚಿಹ್ನೆಯನ್ನು ಹೆಸರಿಸಿರಿ.**

? ಉತ್ತರ : ______ ! ಉತ್ತರ : ______

**14. ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

* ಹಳಗನ್ನಡ ಉತ್ತರ : ______ * ಗುರೂಪದೇಶ ಉತ್ತರ : ______

**15. ಕೆಳಗಿನ ಪದಗಳನ್ನು ಕೂಡಿಸಿ ಬರೆಯಿರಿ.**

* ಸೂರ್ಯ+ಉದಯ= ಉತ್ತರ : ____________ * ದೇವ+ಆಲಯ= ಉತ್ತರ : ____________

**16. ಕೆಳಗಿನ ಪದಗಳಿಗೆ ವಿರುದ್ಧ ಪದ ಬರೆಯಿರಿ.**

* ಧರ್ಮ ಉತ್ತರ : ____________ * ಬಡತನ ಉತ್ತರ : ____________

17. **ಕೆಳಗಿನ ಪದಗಳ ವಚನ ಬದಲಿಸಿ ಬರೆಯಿರಿ.**

* ಯುವಕರು – ________ * ಅಣ್ಣಂದಿರು – ________ * ಶಾಲೆ – ________ * ರಾಜ್ಯ – ________

**18. ಕೆಳಗಿನ ವಾಕ್ಯಗಳಲ್ಲಿ ಕರ್ತೃಪದ, ಕರ್ಮಪದ ಮತ್ತು ಕ್ರಿಯಾಪದಗಳನ್ನು ಗುರುತಿಸಿ ಬರೆಯಿರಿ.**

* ಉಮಾ ಹಾಡನ್ನು ಹಾಡಿದಳು.

ಉತ್ತರ : **ಕರ್ತೃಪದ :**________ **ಕರ್ಮಪದ :** ________ **ಕ್ರಿಯಾಪದ :** ________

* ರೈತರು ಕಾಳನ್ನು ಬಿತ್ತಿದರು.

ಉತ್ತರ : **ಕರ್ತೃಪದ :**________ **ಕರ್ಮಪದ :** ________ **ಕ್ರಿಯಾಪದ :** ________

**19. ಈ ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.** .

* ಹಾಸಿಗೆ ಇದ್ದಷ್ಟು ಕಾಲುಚಾಚು * ಅತಿಯಾಸೆ ಗತಿಗೇಡು * ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲಿ

**ಉತ್ತರ:**________________________________________

**20. ನೀವು ಗದಗ ಸರಕಾರಿ ಪ್ರೌಢ ಶಾಲೆಯಲ್ಲಿ ಒಂಭತ್ತನೇ ತರಗತಿಯಲ್ಲಿ ಓದುತ್ತಿರುವ ವಿಜಯ/ವಿನುತಾ ಎಂದು ಭಾವಿಸಿ ನಿಮ್ಮ ಅನಾರೋಗ್ಯ ಕಾರಣ ಮೂರು ದಿನಗಳ ರಜೆಕೋರಿ ಮುಖ್ಯೋಪಾಧ್ಯಾಯರಿಗೊಂದು ರಜೆಪತ್ರ ಬರೆಯಿರಿ.** **ಅಥವಾ**

**ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ.**

* ಪರಿಸರ * ಗ್ರಂಥಾಲಯ * ರಾಷ್ಟ್ರೀಯ ಹಬ್ಬಗಳು

**ಉತ್ತರ:**________________________________________